ಸ್ಯ 1903ನೆ ಇಸವಿ ಡಿಸೆಂಬರ್ ತಾರೀಖು 7.

ಮೆ|| ಎ. ಜೆ. ಲೊಬೋಯವರಿಂದ ಸ್ಯ 1902—1903ನೆ ಸಾಲಿನ ಕಂದಾಯ ಬಾಕಿ ಬಗ್ಗೆ ಮೂಡಿಗೆರೆ ತಾಲ್ಲೂಕು ಬಣಕ್ಕಲ್ ಹೋಬಳಿ ಹಳಿಕೆರೆ ಗ್ರಾಮದಲ್ಲಿರುವ ಸರ್ವೆ ನಂ. 59 ಎಕರೆ ಪುಳ್ಳ ಕಾಫಿ ಜಮೀನು ಮೂಡಿಗೆರೆ ತಾಲ್ಲೂಕು ಅಮಲ್ದಾರ್ರು ಮತ್ತು ಶಿರಸ್ತದಾರ್ರು ರೂಬರೂಬ್ ಸ್ಯ 1904ನೆ ಇಸವಿ ಜನವರಿ ತಾರೀಖು 22ನೆ ಶುಕ್ರವಾರ ದಿವಸ ದಿವಿ 11 ಘಂಟೆಗೆ ಮೂಡಿಗೆರೆ ಮೂಕ್ಕಾಮಿನಲ್ಲಿ ಬಹಿರಂಗವಾಗಿ ಹರಾಜು ಮಾಡಿಸಲ್ಪಡುವದು. ಜಾಸ್ತಿ ತಪಶೀಲು ಹಿಂದಿನ ವಾರದಲ್ಲಿ ಫಾಯಿಷ್ ಆಗಿರುವ ಹರಾಜು ಇಸ್ತಿಹಾರಿನಲ್ಲಿ ನಮೂದಿರುವದು ನೋಡಲಾಗಿ ತಿಳಿಯಲಾಗುತ್ತೆ.

ಎಂ. ನಾರಾಯಣರಾವ್,
ಡೆಪ್ಯುಟಿ ಕಮಿಶನರ್.

ಬೆಂಗಳೂರು ಡಿವಿಜ್ ಡಿಸ್ಟ್ರಿಕ್ಟ್ ಜಡ್ಜ್‌ರವರ ಕೋರ್ಟ್‌ನಲ್ಲಿ.

ಸ್ಯ 1903—1904ನೆ ಇಸವಿ ಅರ್ಜೀ ನಂಬರ್ 236.

ಮೃತಪಟ್ಟ ಸಿ. ಕೆ. ಲಕ್ಷ್ಮೀನಾರಾಯಣರಾಯರ ಆಸ್ತೀ ವಿಷಯದಲ್ಲಿ—

ಅರ್ಜೀದಾರ್ರು ಸಾಗರದಲ್ಲಿರುವ 1ನೆ ಸಿ. ಕೆ. ವೆಂಕಟರಮಣಯ್ಯ, 2ನೆ ಸಿ. ಕೆ. ವಾಸುದೇವರಾವ್, 3ನೆ ಸಿ. ಕೆ. ರಾಮರಾವ್, ಮೃತಪಟ್ಟ ಸದರೀ ಸಿ. ಕೆ. ಲಕ್ಷ್ಮೀನಾರಾಯಣ ರಾಯರಿಗೆ ಸಹೋದರರು ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಬಳ್ಳಾಪುರದಲ್ಲಿ ವಾಸಸ್ಥರಾಗಿ ಮೃತಪಟ್ಟ ಸಿ. ಕೆ. ಲಕ್ಷ್ಮೀನಾರಾಯಣರಾಯರ ಜಿಂದಗಿ ಬಗ್ಯಾಗಿ ಬರತಕ್ಕ ಸಾಲವನ್ನು ವಸೂಲ್ ಮಾಡುವದಕ್ಕೆ 1901ನೆ ಇಸವಿ 7ನೆ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ 1ನೆ ಸಿ. ಕೆ. ವೆಂಕಟರಮಣಯ್ಯ, 2ನೆ ಸಿ. ಕೆ. ವಾಸುದೇವರಾವ್, 3ನೆ ಸಿ. ಕೆ. ರಾಮರಾವ್ ಯವರ ಅರ್ಜಿಯನ್ನು ಸ್ಯ 1904ನೆ ಇಸವಿ ಫೆಬ್ರವರಿ ತಿಂಗಳು ತಾರೀಖು 5ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯನ್ನ ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಸಿ. ಕೆ. ಲಕ್ಷ್ಮೀನಾರಾಯಣರಾಯರ ಆಸ್ತಿಗೆ ಹಕ್ಕುದಾರರಾದ ವಿಸಿಪ್ಪರೂ ಈ ಕೋರ್ಟ್‌ನಲ್ಲಿ ಹಾಜರಿ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

ಸ್ಯ 1903ನೆ ಇಸವಿ ಡಿಸೆಂಬರ್ ತಿಂಗಳು 23ನೆ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್ತೊಡನೆ ಕೊಡೋಣಾಗಿಧೆ.

ಎಸ್. ಆರ್. ಸುಬ್ರಾಯ ಐಯ್ಯರ್,
ಡಿಸ್ಟ್ರಿಕ್ಟ್ ಜಡ್ಜ್.

ಚಿತ್ರದುರ್ಗ ಡಿವಿಜ್.

ನೋಟಿಸ್.

ಚಿತ್ರದುರ್ಗ ಡಿವಿಜ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ಆಫೀಸಿನಲ್ಲಿ, ಮಿರಾಸಾಬಿ ಹಳ್ಳಿ ತಲಾವ್ ಕಂಟ್ರಾಕ್ಟರ್ ರಾಮಲಿಂಗಂ ಎಂಬುವರಿಗೆ ಪಾವತಿ ಆಗಬೇಕಾಗಿರುವ ರೂ. 8—9—1 ಪೈ ಬಾಕಿ ನಿಂತಿರುತ್ತೆ. ಈ ತಾರೀಖು ಲಾಗಾಯಿತು 3 ತಿಂಗಳೊಳಗಾಗಿ ಮೇಲ್ಕಂಡ ಕಂಟ್ರಾಕ್ಟುದಾರರೇ ಆಗಲಿ ಅಥವಾ ಅವರ ಸರಿಯಾದ ವಾರಸ್ದಾರರೇ ಆಗಲಿ ಚಿತ್ರದುರ್ಗ ಡಿವಿಜ್ ಎಗ್ಜಿಕ್ಯೂಟಿವ್ ಇಂಜಿನಿಯರ್ ಸಾಹೇಬರವರ ರೂಬರೂಬು ಹಾಜರಾಗಿ ಹಣಾ ತೆಗದುಕೊಳ್ಳತಕ್ಕದ್ದು. ತಪ್ಪಿದಲ್ಲಿ ಮೊಬಲಗು ಸರಕಾರಕ್ಕೆ ಜಮಾ ಮಾಡಿಕೊಳ್ಳಲ್ಪಡುತ್ತೆ.

ಮೈ. ಶ್ರೀನಿವಾಸರಾವ್,
ಎಗ್ಜಿಕ್ಯೂಟಿವ್ ಇಂಜಿನಿಯರ್.

ಬೆಂಗಳೂರು ಸೆಂಟ್ರಲ್ ಜೈಲ್.

ತಾರೀಖು 15ನೆ ಡಿಸೆಂಬರ್ 1903.

ಇದರಿಂದ ತಿಳಿಯಪಡಿಸುವದೇನಂದರೆ—ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಖೈದು ಮಾಡಲ್ಪಟ್ಟು ಇರುವ ಕೈದಿಗಳ ಉಪಯೋಗದ ಬಗ್ಯೆ ಸ್ಯ 1904ನೆ ಇಸವಿ ಫೆಬ್ರವರಿ ಗುರ್ಯೇ ಲಾಗಾಯಿತು ಸ್ಯ 1905ನೆ ಇಸವಿ ಜನವರಿ 31ನೆ ತಾರೀಖಿನ ವರಿಗೂ ಆ 2 ದಿನಗಳೂ ಸೇರಿ ಜಿನಸುಗಳನ್ನು ಕೆಂಟ್ರಾಕ್ಟು ಮೂಲಕ ಸರಬರಾಯಿ ಮಾಡುವ ಬಗ್ಯೆ ಬರುವ ಮೊಹರ್ ಮಾಡಲ್ಪಟ್ಟ ದರಖಾಸ್ತುಗಳು ಬೆಂಗಳೂರು ಸೆಂಟ್ರಲ್ ಜೈಲ್ ಸೂಪರ್‌ಟೆಂಡೆಂಟರವರಿಂದ ಸ್ಯ 1904ನೆ ಇಸವಿ ಜನವರಿ ತಾರೀಖು 15ನೆ ಶುಕ್ರವಾರ ಹಗಲು 10 ಘಂಟೆ ವರಿಗೂ ತೆಗದುಕೊಳ್ಳಲ್ಪಡುವವು.

ಸರಬರಾಯಿ ಆಗಬೇಕಾದ ಪದಾರ್ಥಗಳ ತಪಶೀಲು ಮತ್ತು ದರಖಾಸ್ತುಗಳ ಸಂಬಂಧವಾದ ಕರಾರುಗಳು 1903ನೆ ಇಸವಿ ಡಿಸೆಂಬರು 24ನೆ ತಾರೀಖಿನ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟವಾಡಿ ಇರುತ್ತದೆ.